# ಹಸಿರು ಸಂಸ್ಕೃತಿ

## ನರರೂಪಿ ದೈವತೋ ರೈತಂ

ಕಾಟೇನಹಳ್ಳಿ ಸಂಚಿಕೆ -1

12-08-2022 to 02-09-2022

# ಮುನ್ನುಡಿ



ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ನೈಜ ಜೀವನದ ಪರಿಸ್ಥಿತಿಯಲ್ಲಿ ಪ್ರಾಯೋಗಿಕ ಅನುಭವದ ಜೊತೆಗೆ ಗ್ರಾಮೀಣ ಪ್ರದೇಶಕ್ಕೆ ಒಡ್ಡಿಕೊಳ್ಳುವ ಅವಕಾಶವನ್ನು ರೂಪಿಸುತ್ತದೆ.ಜೊತೆಗೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಸಂವಹನ ಕೌಶಲ್ಯವನ್ನು ವೃದ್ಧಿಸಲು ,ಸ್ಥಳೀಯ ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳಲು ನೆರವಾಗುತ್ತದೆ.

- ಡಾ.ಎನ್.ಬಿ ಪ್ರಕಾಶ
ಡೀನ್ ( ಕೃಷಿ)

ಪ್ರಿಯ ಓದುಗರೇ, ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವ ಜೊತೆಗೆ ಗ್ರಾಮೀಣ ಭಾಗದ ಕೃಷಿ ಅನುಭವ ಪಡೆಯಲು ಒಂದು ಉತ್ತಮ ವೇದಿಕೆಯಾಗಿರುತ್ತದೆ. ಕಾರ್ಯಕ್ರಮದ ಜೊತೆಯಲ್ಲಿ ಈ "ಹಸಿರು ಸಂಸ್ಕೃತಿ ನರರೂಪಿ ದೈವತೋ ರೈತಂ" ಸಂಚಿಕೆ ತರುವುದು ವಿದ್ಯಾರ್ಥಿಗಳಲ್ಲಿ ಮಾಹಿತಿ ಸಂಗ್ರಹಣೆ, ಸಂಕಲನ, ಪ್ರಕಟಣಾ ಕೌಶಲ್ಯ ಹೆಚ್ಚಿಸುವಲ್ಲಿ ಸಹಕಾರಿಯಾ ಗಿದೆ. ವಿದ್ಯಾರ್ಥಿಗಳ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಆಶಿಸುತ್ತೇ ನೆ.



- ಡಾ.ವೈ.ಎನ್.ಶಿವಲಿಂಗಯ್ಯ
ಪ್ರಾಧ್ಯಾಪಕರು ಮತ್ತು
ಮುಖ್ಯಸ್ಥರು
ಕೃಷಿ ವಿಸ್ತರಣಾ ವಿಭಾ ಗ



ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವು ನಮ್ಮ ವಿದ್ಯಾರ್ಥಿಗಳಿಗೆ ಹಳ್ಳಿಗಳಲ್ಲಿ ಪ್ರಯೋಗಿಕವಾಗಿ ಕೃಷಿ ಅನುಭವ ಪಡೆಯಲು ಸಹಕಾರಿಯಾಗಿದೆ. ಜೊತೆಗೆ ಗ್ರಾಮೀಣ ಸೊಡಗಿನ ಅನುಭವ ಪಡೆಯಲು ಮತ್ತು ಸಂವಹನ ಕೌಶಲ್ಯವನ್ನು ಬೆಳೆಸಿಕೊಳ್ಳಲು ಒಂ ಉತ್ತಮ ಅವಕಾಶ ನೀಡುತ್ತದೆ. ಇದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ ಬೆಳೆಯುತ್ತದೆ. ಈ ಸಮಯದಲ್ಲಿ ರೈತರಿಂದ ಕಲಿಯಲು ಹಾಗೂ ರೈತರಿಗೆ ತಾಂತ್ರಿಕತೆಗಳನ್ನು ತಿಳಿಸಲು ಗ್ರಾಮಗಳಲ್ಲಿ ಹಮ್ಮಿಕೊಳ್ಳುವ ಚಟುವಟಿಕೆಗಳನ್ನು ಮತ್ತು ಅನುಭವಗಳನ್ನು ವ್ಯಕ್ತಪಡಿಸ ಕಾಟೇನಹಳ್ಳಿ ಒಂದು ಕೈಗನಡಿಯಾಗಿದೆ. ವಿದ್ಯಾರ್ಥಿಗಳ ಈ ಪ್ರಯತ್ನವು ಉತ್ತಮವಾಗಿ ಮೂಡಿ ಬರಲಿ ಎಂದು ಶುಭ ಹಾರೈಸುತ್ತೇನೆ.

-ಡಾ.ಸಿ.ಎಮ್.ಸವಿತಾ
ಸಹ ಪ್ರಾಧ್ಯಾಪಕರು
ಕೃಷಿ ವಿಸ್ತರಣಾ ವಿಭಾಗ




## ಮೂರು ತಿಂಗಳ ಪಯಣಕ್ಕೆ ಮೊದಲ ಹೆಜ್ಜೆ:

ಸೂರ್ಯನು ಬಾನೆತ್ತರಕ್ಕೆ ಏರುತ್ತಿರಲು, ನಮ್ಮ ಬಸ್ಸಿನ ಪಯಣ ಅಡಿಕೆ, ಬಾಳೆ, ರಾಗಿಯ ಸಿರಿ ಊರಿನ ಕಡೆಗೆ ಹೊರಡುತ್ತಿರಲು ವಿಘ್ನ ವಿನಾಶಕನ ಆಶೀರ್ವಾದದೊಂದಿಗೆ ಸುರಕ್ಷಿತವಾಗಿ ಸುಂದರ ಗ್ರಾಮಕ್ಕೆ ತಲುಪಿದೆವು. ನಮ್ಮ ಗುರುಮಾತೆಯಾದ ಡಾ|| ಸಿ.ಎಂ.ಸವಿತಾ ರವರ ಆಶೀರ್ವಾದ ಮತ್ತು ಹಿತವಚನವಾದ "ಆಗಿ ನೀವು ಸ್ವಾವಲಂಬಿ ಆಗ ಬೇಡಿ ಪರಾವಲಂಬಿ" ಎಂಬ ಮಾತಿನಂತೆ ಕಾಟೇನಹಳ್ಳಿ ಗ್ರಾಮಕ್ಕೆ ೩ ತಿಂಗಳ ವಾಸ್ತವ್ಯ ಹೂಡಿದೆವು.



## ಶಾಲೆಯಲ್ಲಿ ನಲಿ ಕಲಿ

ಮೊದಲ ಬಾರಿಗೆ ಕಾಟೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಗೆ ನಾವು ಭೇಟಿ ನೀಡಿದೆವು. ಆಗ ಶಾಲೆಯಲ್ಲಿ ಅಮೃತ ಮಹೋತ್ಸಾಹಕ್ಕೆ ತಯಾರಿ ನಡೆಯುತ್ತಿತ್ತು. ನಾವು ಎಲ್ಲರೂ ಸೇರಿ ಸ್ವಚ್ಛತಾ ಕಾರ್ಯಕ್ರಮ, ಮಕ್ಕಳಿಗೆ ನೃತ್ಯ, ಏಕಪಾತ್ರ ಅಭಿನಯ ಹಾಗೂ ಅನೇಕ ಕಾರ್ಯಕ್ರಮಗಳನ್ನು ತಯಾರಿ ಮಾಡಲು ಕೈಜೋಡಿಸಿದೆವು. ಇದರಿಂದ ಶಿಕ್ಷಕರು ಮತ್ತು ಮಕ್ಕಳ ಜೊತೆ ಬಾಂಧವ್ಯ ಬೆಳೆಸಿಕೊಂಡೆವು.

## ಅಮೃತಗಳಿಗೆಯಲ್ಲಿ ನಮ್ಮ ಪಾತ್ರ:



ಈ ಪುಣ್ಯ ದೇಶದಲ್ಲಿ ಹುಟ್ಟಿದ್ದಕ್ಕೆ ನಾವು ಧನ್ಯರು. ಅದಕ್ಕಾಗಿ ಹಲವಾರು ತ್ಯಾಗಗಳನ್ನು, ಬಲಿದಾನಗಳನ್ನು ಮಾಡಿದ ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ನಾವು ಧನ್ಯವಾದ ಹೇಳಬೇಕು. ಎಲ್ಲರಿಗೂ ೭೬ನೇ, ೨೦೨೨ ರ ಸ್ವಾತಂತ್ರ ದಿನಾಚರಣೆಯ ಶುಭಾಶಯಗಳು!

ಈ ವರ್ಷ ನಮ್ಮ ಕಾಟೇನಹಳ್ಳಿಯಲ್ಲಿ ಅಮೃತ ಮಹೋತ್ಸವವನ್ನು ಆಚರಿಸಲು ಅವಕಾಶ ಮಾಡಿಕೊಟ್ಟಿರುವ ನಮ್ಮ ಕೃಷಿ ವಿಶ್ವ ವಿದ್ಯಾನಿಲಯಕ್ಕೆ ನಮ್ಮೆಲ್ಲರ ಧನ್ಯವಾದಗಳು ನಾವು ಕಾಟೇನಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡೊಳ್ಳು ಬಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆವು ಹಾಗೂ ಎಲ್ಲಾ ಗಣ್ಯರು, ಹಿರಿಯರು, ಮಕ್ಕಳು, ಸದಸ್ಯರನ್ನು ಈ ಸುವರ್ಣ ಗಳಿಗೆಯಲ್ಲಿ ದೇಶಭಕ್ತಿಗೀತೆ, ಏಕಪಾತ್ರ ಅಭಿನಯ ಮತ್ತು ಶೌರ್ಯ ಭಾವ ಜೊತೆಗೆ ಸುಂದರ ಮೆರವಣಿಗೆ ನಡೆಸಿಕೊಟ್ಟೆವು.

# ರೈತ ಸಂಪರ್ಕ ಕೇಂದ್ರಕ್ಕೆ ನಮ್ಮ ಭೇಟಿ:



ನಮ್ಮ ಹಳ್ಳಿಯ ಕುರಿತಾಗಿ ಮಾಹಿತಿ ಪಡೆಯಲು ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಲಾಯಿತು, ಕೃಷಿ ಅಧಿಕಾರಿಗಳನ್ನು ಭೇಟಿ ಮಾಡಿದ ವಿದ್ಯಾರ್ಥಿಗಳು ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿಗೂ ಸಹ ಭೇಟಿ ನೀಡಿ ಮಾಹಿತಿ ಕಲೆ ಹಾಕಲಾಯಿತು.

# ಮೊದಲ ಗ್ರಾಮ ಸಭೆ




ನಮ್ಮ ಗುರುಗಳಾದ ಡಾ|| ಸಿ. ಎಂ.ಸವಿತಾ, ಡಾ|| ಟಿ. ಎಸ್. ಮಂಜುನಾಥ್ ಸ್ವಾಮಿ, ಡಾ|| ಡಿ. ಕೆ. ಶ್ರೀನಿವಾಸ, ಡಾ|| ಕೆ.ಎಸ್. ರಾಜಶೇಖರಪ್ಪ ಮತ್ತು ಕಾಟೇನಹಳ್ಳಿಯ ರೈತರೊಡನೆ ಲಕ್ಷ್ಮಿ ದೇವಿಯ ಪಾದ ಕಮಲಗಳಿಗೆ ಆರಾಧಿಸಿ ಮೊದಲ ಗ್ರಾಮ ಸಭೆಯನ್ನು ಆರಂಭಿಸಲಾಯಿತು. ಪ್ರತಿಯೊಬ್ಬ ಗುರುಗಳು ನಾವು ಇಲ್ಲಿ ಬಂದಿರುವ ಮುಖ್ಯ ಉದ್ದೇಶದ ಬಗ್ಗೆ ಮಾತನಾಡಿದರು ಮತ್ತು ಗ್ರಾಮದ ಜನರಿಗೆ ಅಗತ್ಯವಾದ ಮಾಹಿತಿಗಳನ್ನು ತಿಳಿಸಿಕೊಟ್ಟರು ಹಾಗೂ ಅವರಿಗೆ ಸೂಕ್ತವಾದ ಪರಿಹಾರ ಕ್ರಮಗಳನ್ನು ಒದಗಿಸಿದರು, ಪ್ರತಿಯೊಬ್ಬ ರೈತರು ಉತ್ಸಾಹ ಮತ್ತು ಆಸಕ್ತಿಯಿಂದ ಸಭೆಯಲ್ಲಿ ಭಾಗಿಯಾದರು ಹೀಗೆ ನಮ್ಮ ಮೊದಲ ಸಭೆಯು ಸಂತಸದಲ್ಲಿ ಮುಕ್ತಾಯವಾಯಿತು.









## ಕೃಷಿ ಮಾಹಿತಿ ಕೇಂದ್ರ ಉದ್ಘಾಟನೆ:

ಕೃಷಿಯಲ್ಲಿ ಬೆಳೆಗೆ ಬರುವ ರೋಗಗಳು, ಹೊಸ ತಂತ್ರಜ್ಞಾನಗಳು, ಬೆಳೆ ನಿರ್ವಹಣೆ, ಇಳುವರಿ ಹೆಚ್ಚಿಸುವ ರೀತಿಗಳು, ಕೀಟನಾಶಕಗಳು, ಹೈನುಗಾರಿಕೆ, ಕುರಿ ಕೋಳಿ ಸಾಕಾಣಿಕೆ ಇವೆಲ್ಲದರ ಬಗ್ಗೆ ಸಮಗ್ರ ಮಾಹಿತಿಯನ್ನು ಸರಳವಾಗಿ ಅರ್ಥವಾಗುವಂತೆ ರೈತರಿಗೆ ತಲುಪಿಸಲು ಇಚ್ಚೆಸುತ್ತಾ ಡಾ ಸವಿತಾ ರವರ ನೇತೃತ್ವದಲ್ಲಿ ೧೬/೦೮/೨೦೨೨ ರಂದು ಉದ್ಘಾಟನೆ ಮಾಡಿದೆವು.

## ಮಣ್ಣಿನ ಮಾದರಿ:

ಮಣ್ಣಿನ ಪರೀಕ್ಷೆ ಮಾಡಲು ಮಣ್ಣಿನ ಮಾದರಿ ಎಂಬುದು ಮುಖ್ಯ ಅಂಶವಾಗಿದೆ. ಸರಿಯಾದ ವಿಧಾನದಲ್ಲಿ ಮಣ್ಣಿನ ಮಾದರಿ ತೆಗೆಯುವುದು ಅತ್ಯಗತ್ಯ. ನಾವು ಮಣ್ಣಿನ ಬೌದ್ಧಿಕ, ರಾಸಾಯನಿಕ ಮತ್ತು ಜೈವಿಕ ಗುಣಧರ್ಮಗಳನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಲು ಮಣ್ಣಿನ ಮಾದರಿ ತೆಗೆದು ಮಣ್ಣಿನ ಪರೀಕ್ಷೆಗೆ ಸಿದ್ಧಪಡಿಸಿದೆವು. ಇದರಿಂದ ಮಣ್ಣಿನ ಆರೋಗ್ಯದ ಬಗ್ಗೆ ತಿಳಿದುಕೊಳ್ಳಬಹುದು ಮತ್ತು ರಾಸಾಯನಿಕ ಗೊಬ್ಬರದ ಸರಿ ಪ್ರಮಾಣದ ಬಳಕೆಯ ಬಗ್ಗೆ ಕಂಡುಕೊಳ್ಳಬಹುದು.

## ಬೆಳೆ ವಿನ್ಯಾಸ ಯೋಜನೆ:

ನಮಗೆ ಸಿಕ್ಕಿರುವ ಜಾಗವನ್ನು ನಾವು ಹೇಗೆ ಬೆಳೆ ಬೆಳೆಯಲು ಉಪಯೋಗಿಸಬಹುದು ಎಂಬುದು ಬೆಳೆ ವಿನ್ಯಾಸ. ನಾವು ಹವಾಮಾನ, ಮಣ್ಣಿನ ಗುಣಲಕ್ಷಣಗಳು, ನೀರಾವರಿ ಅಂತಹ ಲಕ್ಷಣಗಳನ್ನು ಇಟ್ಟುಕೊಂಡು ಬೆಳೆ ಬೆಳೆಯಲು ಸೂಕ್ತವಾದ ಜಾಗವನ್ನು ಆರಿಸಿದೆವು. ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆಯುವುದರಿಂದ ಅದರ ಇಳುವರಿ ಜಾಸ್ತಿಯಾಗುವುದು. ಇದರಿಂದ ನಾವು ಬೆಳೆ ವಿನ್ಯಾಸ ಯೋಜಿಸಿ ಜಾಗವನ್ನು ಉಪಯುಕ್ತವಾಗಿ ಬಳಸಿಕೊಂಡಿದ್ದೇವೆ.

## ಹೊಂಗನಸಿನೊಳ್ ಚಿಗುರಿದ ಬಳ್ಳಿ ನಮ್ಮ ಕಾಟೇನಹಳ್ಳಿ:



ಕೃಷಿ ಎಂಬುದು ಬರೀ ಪದವಲ್ಲ, ಶಬ್ಧವಲ್ಲ ಪ್ರತಿಯೊಬ್ಬ ರೈತನ ಎದೆಮಿಡಿತ, ನಾಡಿಮಿಡಿತ. ಈ ಹಳ್ಳಿಯ ಜನರ ಮಾತು, ನುಡಿ, ಹೃದಯ ಶ್ರೀಮಂತಿಕೆ ಚಂದವೋ ಚಂದ.
ಹಗಲಿರುಳು ನಾನು ನನ್ನದೆಂದು ಭೇದ ಮಾಡದೆ ಭೂಮಾತೆಯ ಹಸ್ತಾಲಂಕಾರದಲ್ಲಿ ಹೊನ್ನ ಬೆಳಕನ್ನು ಕೊಯ್ಲು ಮಾಡಿ ಜಗಕ್ಕೆ ಉಣಬಡಿಸುವ ರೈತರಿಗೊಂದು ಸಲಾಂ.
ಒಂದು ಬಾರಿ ಉಂಡವನು ಯೋಗಿ, ಎರಡು ಬಾರಿ ಉಂಡವನು ಭೋಗಿ ಎಂಬ ಧ್ಯೇಯ ವಾಕ್ಯವನ್ನು ಪಾಲಿಸುತ್ತಿರುವ ಈ ಹಳ್ಳಿಯ ಜನ, ಹೊಲದಲ್ಲಿ ಬೆವರು ಹರಿಸಿ ಹಗಲು ರಾತ್ರಿ ಎನ್ನದೇ ದುಡಿಯುತ್ತಾರೆ.

## ನೇಗಿಲ ಕೂಲದೊಳಗಡಗಿದೆ ಕರ್ಮ ನೇಗಿಲ ಮೇಲೆಯೇ ನಿಂತಿದೆ ಧರ್ಮ:



ಉತ್ತಿದ ನೆಲ ಬಿತ್ತಿದ ನೆಲ ಹೊನ್ನ ಕೊಡದೆ ಇರುವುದೇ.
ಬೆವರ ಹನಿ ಅಮೃತವಾಗಿ ಜೀವಕ್ಕೆ ಜೀವ ಕೊಡುವ ಬಗೆಯೇ ವ್ಯವಸಾಯ.
ಇದರ ಗಮ್ಮತ್ತು ತಿಳಿವ ಅನ್ವೇಷಣೆಯಲ್ಲಿ ನಾವೆಲ್ಲಾ ಮೊದಲ ಭೂಮಿ ಸಿದ್ಧತೆ ಮಾಡಿದೆವು.
ಕಳ ಕಳನೆ ಕಂಗೊಳಿಸುತ್ತಿದ್ದ ಕಳೆಗಳ ಹೆಕ್ಕಿ ತೆಗೆದೆವು.
ಬರಬರನೆ ಸಿಕ್ಕ ಕಲ್ಲುಗಳುನ್ನು ಆಯ್ದೆವು.
ಮಾನವನಿಗಿಂತ ನಾನೇನು ಕಡಿಮೆ ಇಲ್ಲ ಎಂದ ಟ್ರಾಕ್ಟರ್ ಇಡೀ ಭೂಮಿಯನ್ನು ಹಸನಾಗಿ ಸಿದ್ದ ಮಾಡಿತು.

## ತೊಂದರೆಯಲ್ಲಿ ತೋಟವೋ ತೋಟದಲ್ಲಿ ತೊಂದರೆಯೋ!!



ಶಿಕ್ಷಕರೊಂದಿಗೆ ರವಿ ಅವರ ತೋಟಕ್ಕೆ ಹೋದೆವು...
ಬೆಂಡೆಕಾಯಿಯಲ್ಲಿ ಹೇರಿಕ್ಯಾಟರ್ ಪಿಲ್ಲರ್, ಲೀಫ್ ರೋಲರ್ ಹಾನಿ ಮಾಡಿದ್ದವು.
ಅಡಿಕೆಯಲ್ಲಿ ಇರುವೆಗಳು, ಗಿಡ ಹೇನುಗಳು ಹಾಗೆಯೇ ಹಿಡಿಮುಂಡಿಗೆ ರೋಗ ಆವರಿಸಿತ್ತು, ಇದರಿಂದ ಇಳುವರಿಯಲ್ಲಿ ಏರುಪೇರಾಗಿತ್ತು.
ರವಿ ಅವರ ಮಾತೇನೆಂದರೆ
"ನಾವು ಬರೀ ಕೊಟ್ಟಿಗೆ ಗೊಬ್ಬರವನ್ನೇ ಹಾಕಿ ಸಾವಯವ ಕೃಷಿ ಪಾಲನೆ ಮಾಡಿದ್ದೇವೆ ಆದರೆ ರೋಗ ರುಜಿನಗಳ ತೊಂದರೆ ದಿನೇ ದಿನೇ ಹೆಚ್ಚಾಗುತ್ತಿದೆ"
-ರವಿ, ಕಾಟೇನಹಳ್ಳಿ
ಇದಕ್ಕೆ ನಮ್ಮ ಪ್ರಾಧ್ಯಾಪಕರ ಸಲಹೆ ಏನೆಂದರೆ ಸಾವಯವ ಕೃಷಿಯೊಂದಿಗೆ ಅಗತ್ಯಾನುಸಾರವಾಗಿ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಬೇಕು
ಹಾಗೆಯೇ ಕೀಟ ಔಷಧಗಳನ್ನು ಸಿಂಪಡಣೆ ಮಾಡಬೇಕು.

## ಮನೆ ಮನೆಯ ಮಾಹಿತಿ:



ನಮ್ಮ ಕಾಟೇನಹಳ್ಳಿ ಇರುವುದು ಚಿಕ್ಕದಾಗಿಯಾದರೂ ಇಲ್ಲಿ ಇರುವ ರೈತರ ಮನಸ್ಸುಗಳು ದೊಡ್ಡವು. ಈ ಹಳ್ಳಿಯಲ್ಲಿ ಸುಮಾರು 180 ಮನೆಗಳುಂಟು. ನಮಗೆ ನೀಡಿರುವ ನಿಯಮಗಳ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಗೂ ಐದರಂತೆ ರೈತರ ಮನೆಗಳನ್ನು ಭಾಗಿಸಿದೆವು ಮತ್ತು ಅವರ ಮನೆಗಳಿಗೆ ಹೋಗಿ ಅವರು, ರೈತರ ದೈನಂದಿನ ಮತ್ತು ವ್ಯವಸಾಯದ ಜೀವನ, ಲಾಭ ನಷ್ಟಗಳ ಬಗ್ಗೆ ಮಾಹಿತಿ ಸಂಗ್ರಹಿಸಿದೆವು.



## ಬೇಲಿಯೊಳಗೆ ಬೆಳೆ:

ಬೇಲಿಯೂ ಸಾಮಾನ್ಯವಾಗಿ ಹೊರಾಂಗಣದ ಒಂದು ಪ್ರದೇಶವನ್ನು ಆವರಿಸುವ ಒಂದು ರಚನೆ. ನಾವು ನಮ್ಮ ಬೆಳೆಯನ್ನು ಕೋಳಿ, ನಾಯಿ, ಕುರಿ, ಮೇಕೆಯಂತಹ ಪ್ರಾಣಿ-ಪಕ್ಷಿಗಳಿಂದ ಸಂರಕ್ಷಿಸಲು ಕಂಬಗಳು ತಂತಿ ಮತ್ತು ಹಸಿರು ಅಡ್ಡಪಟ್ಟಿ ಇಂದ ಬೆಳೆಯ ಸುತ್ತಲೂ ಬೇಲಿ ನಿರ್ಮಿಸಿದೆವು.





## ಬೆಳೆಯ ಯಶಸ್ಸಿಗೆ ಇಳೆ ಪೂಜೆ:

ಬೆಳೆ ಬೆಳೆಯುವ ಮುನ್ನ ಭೂಮಿ ತಾಯಿಗೆ ಪೂಜಿಸುವುದು ನಮ್ಮ ಭಾರತೀಯ ಸಂಸ್ಕೃತಿ. ಬೆಳೆ ಬೆಳೆಯಲು ಯಾವುದೇ ದೋಷ ಉಂಟಾಗದಿರಲಿ ಎಂದು ಕೋರಿ ಭೂಮಿ ತಾಯಿಗೆ ಪೂಜೆ ಸಲ್ಲಿಸಿದೆವು. ಇದನ್ನು ಈಶಾನ್ಯ ದಿಕ್ಕಿನಲ್ಲಿ ಮಾಡಿ , ನಿವೇಶನವನ್ನು ಗೋಮೂತ್ರ, ಪರ್ವಶುದ್ದಿ ಮತ್ತು ಅರಿಶಿಣ ನೀರಿನಿಂದ ಶುದ್ಧ ಮಾಡಿದೆವು ಮತ್ತು ಬೆಳೆ ಚೆನ್ನಾಗಿ ಬರಲಿ ಎಂದು ಪ್ರಾರ್ಥಿಸಿದೆವು.



## ನಡಿರಿ ನಿಂಬೆ ಕಿಳೋಣ:

ನಾವು ನಮಗೆ ವಸತಿ ನೀಡಿದ ರೈತರಾದ ಲಿಂಗಪ್ಪ ಅವರ ನಿಂಬೆ ತೋಟಕ್ಕೆ ಪ್ರಯಾಣಿಸಿದೆವು ಮತ್ತು ಸುಮಾರು ೪೦೦೦ ರಸಭರಿತವಾದ ನಿಂಬೆಹಣ್ಣನ್ನು ಕೊಯ್ಲು ಮಾಡಿದೆವು ಇದರಿಂದ ನಮಗೆ ನಿಂಬೆಯ ಬೇಸಾಯದ ಬಗ್ಗೆ ಮತ್ತು ಅದರಲ್ಲಿ ಬರುವಂತಹ ಸಾಮಾನ್ಯ ರೋಗಗಳಾದ ನಿಂಬೆ ಹುರುಪು, ಸಿಟ್ರಸ್ ಕ್ಯಾಂಕರ್, ಗ್ರೀನಿಂಗ ಬಗ್ಗೆ ಇನ್ನಷ್ಟು ಮಾಹಿತಿ ಪಡೆದುಕೊಂಡೆವು.



## ಬೆಳೆಯ ವೃದ್ಧಿಗೆ ಬೀಜೋಪಚಾರ:

ಬೀಜಗಳ ಮೂಲಕ ಬೇರೆ ಬೇರೆ ರೋಗ ಬರುತ್ತದೆ, ಕೀಟಗಳಿಂದ ದಾಸ್ತಾನಿನಲ್ಲಿ ಇಟ್ಟ ಬೀಜ ಹಾಳಾಗುತ್ತದೆ. ಇದನ್ನು ತಡೆಯಲ ಶಿಲೀಂದ್ರ ನಾಶಕ ಮತ್ತು ಕೀಟನಾಶಕಗಳಿಂದ ಉಪಚಾರ ಮಾಡುವುದಕ್ಕೆ ಬಿಜೋಪಚಾರ ಎನ್ನುತ್ತಾರೆ.

ಬಹುಪಾಲು ಬೆಳೆಗಳ ಸಂತಾನವೃದ್ಧಿ ಬೀಜಗಳಿಂದಲೇ ಆಗುವುದು. ಲಾಭದಾಯಕ ಇಳುವರಿಗೆ ಆರೋಗ್ಯಕರ ಬೆಳೆಗೆ ಬೀಜ ಅತಿ ಪ್ರಮುಖವಾದ ಸಂಪನ್ಮೂಲವಾಗಿದೆ. ಕೃಷಿಯ ಯಶಸ್ಸಿಗೆ ಹಾಗೂ ಅಧಿಕ ಇಳುವರಿಗೆ ಉತ್ತಮ ಗುಣಮಟ್ಟದ ಬೀಜದ ಕೊಡುಗೆ ಪ್ರಾಮುಕವಾಗಿದೆ.

ನಾವು ಬೀಜಗಳಿಗೆ ಜೈವಿಕ ಬಿಜೋಪಚಾರ ಮಾಡಿದೆವು. ಇದಕ್ಕೆ ಟ್ರೈಕೋಡರ್ಮ ಅಂತಹ ಸಜೀವ ಸೂಕ್ಷ್ಮಾಣು ಜೀವಿಗಳನ್ನು ಉಪಯೋಗಿಸಿಕೊಂಡು ಬೀಜಕ್ಕೆ ಚಿಕಿತ್ಸೆ ನೀಡಿದೆವು.



## ನೆಟ್ಟೆನೊಂದು ಬೀಜ:

ಭೂದೇವಿಯ ಗರ್ಭದೊಳಗೆ ಸುವರ್ಣ ಸಿರಿಯ ಬಿತ್ತನೆಯನ್ನು ನಿಷ್ಕಲ್ಮಶ ಮನಸ್ಸಿನ ನಿರ್ಮಲ ಹಸ್ತದಿಂದ ನಮ್ಮ ಕಾಲೇಜಿನ ಶುದ್ಧ ಬೀಜವನ್ನು ಬಿತ್ತಿದೆವು.

# ವಂದನೆಗಳು







